ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
(ಹಿಂದಿನ ಕರ್ನಾಟಕ ಭೂಸೇನಾ ನಿಗಮ ನಿಯಮಿತ)
KARNATAKA RURAL INFRASTRUCTURE DEVELOPMENT LTD.,
(A Government of Karnataka Undertaking)
(Formerly Karnataka Land Army Corporation Limited)

ಸಂ:ಕೆಆರ್‌ಐಡಿಎಲ್/ಸಿಬ್ಬಂದಿ/ನೇರ ನೇಮಕಾತಿ/ಹೆಚ್‌ಕೆಡಿಪಿ/2017-18 ದಿನಾಂಕ:06-10-2017

ಗೆ,
ಸಂಬಂಧಿಸಿದವರಿಗೆ,

**ವಿಷಯ:** ಕೆಆರ್‌ಐಡಿಎಲ್ ಸಂಸ್ಥೆಯಲ್ಲಿ ಸಂವಿಧಾನದ ಅಧಿನಿಯಮ 371 (ಜೆ) ಅನ್ವಯ ಹೈದರಾಬಾದ್-ಕರ್ನಾಟಕ ಪ್ರದೇಶದ ಕಛೇರಿಗಳಲ್ಲಿ ಖಾಲಿ ಇರುವ ಸಹಾಯಕ ಅಭಿಯಂತರರು ಗ್ರೇಡ್ -1 (ಸಿವಿಲ್) / ಕಿರಿಯ ಅಭಿಯಂತರರು (ಸಿವಿಲ್) / ಪ್ರಥಮ ದರ್ಜೆ ಸಹಾಯಕರು / ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನೇಮಕಾತಿ – ಮೂಲ ದಾಖಲೆಗಳ ಪರಿಶೀಲನೆ ಕುರಿತು.

**ಉಲ್ಲೇಖ:** ಸಂಸ್ಥೆಯ ಅಧಿಸೂಚನೆ ಸಂ:ಕೆಆರ್‌ಐಡಿಎಲ್/ಸಿಬ್ಬಂದಿ/ನೇಮಕಾತಿ/ಹೈ-ಕ ಪ್ರದೇಶ/2016-17 ದಿನಾಂಕ 27-01-2017.

2. ಸಂಸ್ಥೆಯ ಅಧಿಸೂಚನೆ ಸಂ:ಕೆಆರ್‌ಐಡಿಎಲ್/ಸಿಬ್ಬಂದಿ/ನೇರ ನೇಮಕಾತಿ/ಹೆಚ್‌ಕೆಡಿಪಿ/2017-18 ದಿನಾಂಕ: 21-09-2017.

# # #

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್‌ನಲ್ಲಿ ಅಧಿನಿಯಮ 371-ಜೆ ಅನ್ವಯ ಹೈದರಾಬಾದ್-ಕರ್ನಾಟಕ ಪ್ರದೇಶದ ಕಛೇರಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, **ತಾತ್ಕಾಲಿಕವಾಗಿ ಆಯ್ಕೆಗೊಂಡಿರುವ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನು ನಡೆಸಲು ಉದ್ದೇಶಿಸಲಾಗಿದೆ.**

ಮೇಲ್ಕಂಡ ಹಿನ್ನೆಲೆಯಲ್ಲಿ ದಾಖಲೆಗಳ ಪರಿಶೀಲನೆಗಾಗಿ ಕೆಳಕಂಡ **ಮೂಲ ದಾಖಲೆಗಳೊಂದಿಗೆ ದಿನಾಂಕ 12-10-2017 ರಂದು ಬೆಳಗ್ಗೆ 10.30 ಗಂಟೆಗೆ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, "ಗ್ರಾಮೀಣಾಭಿವೃದ್ಧಿ ಭವನ", 4ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು – 560 009** ಈ ವಿಳಾಸದಲ್ಲಿ ತಪ್ಪದೇ ಹಾಜರಾಗಲು ಸೂಚಿಸಲಾಗಿದೆ.

1. ಜನ್ಮ ದಿನಾಂಕವನ್ನು ಸಮರ್ಥಿಸಲು ಎಸ್.ಎಸ್.ಎಲ್.ಸಿ/ಕ್ಯುಮಿಲೇಟೀವ್ ರೆಕಾರ್ಡ್.
2. ಆಯಾ ಹುದ್ದೆಗೆ ನಿಗಧಿಪಡಿಸಿದ ವಿದ್ಯಾರ್ಹತೆ/ತರಬೇತಿ/ಡಿಪ್ಲೋಮಾ/ಪದವಿ ಪಡೆದ ಮೂಲ ಪ್ರಮಾಣ ಪತ್ರ.
3. ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಸೇರಿರುವ ಬಗ್ಗೆ ಸರ್ಕಾರವು ನಿಗಧಿಪಡಿಸಿರುವ ಪ್ರಪತ್ರದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ.
4. ಗ್ರಾಮೀಣ ಅಭ್ಯರ್ಥಿ ಸೌಲಭ್ಯ ಬಯಸಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ಮೂಲ ಪ್ರಮಾಣ ಪತ್ರ
5. ಕನ್ನಡ ಮಾಧ್ಯಮ ಅಭ್ಯರ್ಥಿ ಸೌಲಭ್ಯ ಬಯಸಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ಮೂಲ ಪ್ರಮಾಣ. (ಕರ್ನಾಟಕದಲ್ಲಿ 1 ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಮೂಲ ಪ್ರಮಾಣ ಪತ್ರ)
6. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಪ್ರವರ್ಗ-1, ಸೌಲಭ್ಯ ಬಯಸಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ಮೂಲ ಪ್ರಮಾಣ ಪತ್ರ.
7. ಪ್ರವರ್ಗ – 2 ಎ/ 2 ಬಿ/ 3 ಎ ಅಥವಾ 3 ಬಿ ಸೌಲಭ್ಯ ಬಯಸಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ಮೂಲ ಪ್ರಮಾಣ ಪತ್ರ (ಪ್ರಮಾಣ ಪತ್ರವನ್ನು ದಿನಾಂಕ 27-01-2017 ಕ್ಕೆ ಐದು ವರ್ಷದೊಳಗಾಗಿ ಪಡೆದಿರಬೇಕು)
8. ಅಂಗವಿಕಲರೆಂದು ಸೌಲಭ್ಯ ಬಯಸಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ಮೂಲ ಪ್ರಮಾಣ ಪತ್ರ.
9. ಪ್ರಸಕ್ತ ರಾಜ್ಯ ಸರ್ಕಾರ/ ಕೇಂದ್ರ ಸರ್ಕಾರ/ ಸ್ವಾಯತ್ತ ಸಂಸ್ಥೆ/ ಅರೆ ಸರ್ಕಾರಿ ಉದ್ಯೋಗಿ ಆಗಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಸಂಬಂಧಿಸಿದ ಇಲಾಖೆಯಿಂದ ಅರ್ಜಿಯನ್ನು ನಿರಾಕ್ಷೇಪಣಾ ಪತ್ರ.
10. ಮಾಜಿ ಯೋಧರು/ ಯುದ್ಧದಲ್ಲಿ ಮಡಿದ ಅಥವಾ ಅವರ ಅವಲಂಬಿತರು ಎಂದು ಸಮರ್ಥಿಸಲು ಸಂಬಂಧಪಟ್ಟ ಮೂಲ ದಾಖಲೆ
11. ಯೋಜನಾ ಸಂತ್ರಸ್ಥರೆಂದು ಸೌಲಭ್ಯ ಬಯಸಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ಮೂಲ ಪ್ರಮಾಣ ಪತ್ರ.

ಈ ಪತ್ರದ ಆಧಾರದ ಮೇಲೆ ಯಾವುದೇ ಅಭ್ಯರ್ಥಿಗೆ ನೇಮಕಾತಿ ಹಕ್ಕು ಪ್ರಾಪ್ತವಾಗುವುದಿಲ್ಲ.

ಸಹಿ ಇದೆ/-
**ಮುಖ್ಯ ಆಡಳಿತಾಧಿಕಾರಿಗಳು**
**ಕೆಆರ್‌ಐಡಿಎಲ್, ಬೆಂಗಳೂರು.**

Grameenabhivruddhi Bhavana,
4th & 5th Floor, Anandrao Circle,
Bangalore-560 009.

ADM - 080- 28015635, 36, 47
Works - 080-28015640, 641
Acct - 080-28015634, 637
Fax - 22879001, 28015644, 45, 34
E-mail : mdkridl@gmail.com